Literacy for a Billion

Movie: Shabarimale Swamy Ayyappa
Year: 1990

Song: Swamiye Ayyappa
Lyricist:

ಸ್ವಾಮಿಯೇ ಅಯ್ಯಪ್ಪ
ಅಯ್ಯಪ್ಪ ಸ್ವಾಮಿಯೇ
ಸ್ವಾಮಿಯೇ ಅಯ್ಯಪ್ಪ
ಅಯ್ಯಪ್ಪ ಸ್ವಾಮಿಯೇ

ಸ್ವಾಮಿ ಶರಣಂ ಅಯ್ಯಪ್ಪ ಶರಣಂ
ಸ್ವಾಮಿ ಶರಣಂ ಅಯ್ಯಪ್ಪ ಶರಣಂ
ಸ್ವಾಮಿಯೇ ಶರಣಂ ಅಯ್ಯಪ್ಪ
ಸ್ವಾಮಿ ಅಯ್ಯಪ್ಪಾ ಸ್ವಾಮಿ ಅಯ್ಯಪ್ಪಾ
ಶರಣಂ ಅಯ್ಯಪ್ಪಾ ತಂದೆ ಶರಣಂ ಅಯ್ಯಪ್ಪಾ
ಶರಣಂ ಅಯ್ಯಪ್ಪಾ ತಂದೆ ಶರಣಂ ಅಯ್ಯಪ್ಪಾ
ಸ್ವಾಮಿ ಅಯ್ಯಪ್ಪಾ ಸ್ವಾಮಿ ಅಯ್ಯಪ್ಪಾ
ಶರಣಂ ಅಯ್ಯಪ್ಪಾ ತಂದೆ ಶರಣಂ ಅಯ್ಯಪ್ಪಾ
ಶರಣಂ ಅಯ್ಯಪ್ಪಾ ತಂದೆ ಶರಣಂ ಅಯ್ಯಪ್ಪಾ

ತಲೆಮೇಲೆ ನಿನ ಇರುಮುಡಿಯು ಇರಲು
ಮನದಲ್ಲಿ ನೋಡೋ ಆಸೆ ತುಂಬಿರಲು
ಸ್ವಾಮಿ ಅಯ್ಯಪ್ಪಾ ಶರಣು ಎನುತಲಿರಲು
ಕಲ್ಲು ಮುಳ್ಳೆಲ್ಲ ಕಾಲ್ಗೆ ಹೂವುಗಳು

ಎರಿಮೇಲಿಯಲ್ಲಿ ಕುಣಿಯುವರು ಎಲ್ಲಾ
ಆನಂದದಿಂದ ಹಾಡದವರಿಲ್ಲಾ
ಸ್ವಾಮಿ ತಿಂದಕ ತೋಂ
ಅಯ್ಯಪ್ಪ ತಿಂದಕ ತೋಂ
ಅಯ್ಯಪ್ಪ ತಿಂದಕ ತೋಂ

ಸ್ವಾಮಿ ತಿಂದಕ ತೋಂ
ಸ್ವಾಮಿ ತಿಂದಕ ತೋಂ ತೋಂ
ಅಯ್ಯಪ್ಪ ತಿಂದಕ ತೋಂ ತೋಂ
ಅಯ್ಯಪ್ಪ ತಿಂದಕ ತೋಂ ತೋಂ
ಸ್ವಾಮಿ ತಿಂದಕ ತೋಂ ತೋಂ
ಎರಿಮೇಲಿಯಲ್ಲಿ ಕುಣಿಯುವರು ಎಲ್ಲಾ
ಆನಂದದಿಂದ ಹಾಡದವರಿಲ್ಲಾ
ಎಂದೆಂದೂ ಅಲ್ಲಿ ಜಾತಿ ಮಾತಿಲ್ಲ
ಸ್ವಾಮಿ ಎದುರಲ್ಲಿ ಒಂದೇ ಜನರೆಲ್ಲ
ಸ್ವಾಮಿ ಅಯ್ಯಪ್ಪಾ ಸ್ವಾಮಿ ಅಯ್ಯಪ್ಪಾ
ಶರಣಂ ಅಯ್ಯಪ್ಪಾ ತಂದೆ ಶರಣಂ ಅಯ್ಯಪ್ಪಾ
ಶರಣಂ ಅಯ್ಯಪ್ಪಾ ತಂದೆ ಶರಣಂ ಅಯ್ಯಪ್ಪಾ

ಕಂಡಾಗ ಅಳುದಾ ನದಿಯನು ಕಣ್ಣು
ನೀರಲ್ಲಿ ಇಡಲು ಈ ಕಾಲ್ಗಳನು
ನೋವೆಲ್ಲ ಮರೆತು ಸಂತೋಷವೇನು
ಶರಣೆಂಬ ಕೂಗೇ ಇಲ್ಲ ಬೇರೇನು
ಕರಿಮಲೆಯ ಮೇಲೆ ನಡೆವಾಗ ನೀನು
ಎಲ್ಲೆಲ್ಲೂ ಬೀಸೋ ತಂಗಾಳಿಯೇನು
ಬಲುಕಠಿಣವಾದ ಆ ಬೆಟ್ಟವನು
ಏರಿ ಇಳಿವಾಗ ಆ ತೃಪ್ತಿಯೇನು
ಸ್ವಾಮಿ ಅಯ್ಯಪ್ಪಾ ಸ್ವಾಮಿ ಅಯ್ಯಪ್ಪಾ
ಶರಣಂ ಅಯ್ಯಪ್ಪಾ ತಂದೆ ಶರಣಂ ಅಯ್ಯಪ್ಪಾ
ಶರಣಂ ಅಯ್ಯಪ್ಪಾ ತಂದೆ ಶರಣಂ ಅಯ್ಯಪ್ಪಾ
ಪಂಪೆಯಲಿ ಸಾನ ದೇವರಧ್ಯಾನ

ಪಂಪೆಯಲಿ ಸಾನ ದೇವರಧ್ಯಾನ
ನೀಗುವುದು ಎಲ್ಲ ಆಯಾಸವನ
ನದಿಯಲ್ಲಿ ಬಿಡುವ ಹಣತೆಗಳ ಸಾಲು
ನೋಡುವುದೆ ಭಾಗ್ಯ ತೇಲಾಡುತಿರಲು
ಮೊದಲ ಸಲ ಗಿರಿಗೆ ಬರುವ ಜನರೆಲ್ಲ
ಶಬರಿ ಪೀಠಕೆ ನಮಿಸಿ ನಡೆಯುವರೆಲ್ಲ
ಶರಣಗುತ್ತಿಯಲಿ ಅಂಬನು ಎಸೆದು
ನಡೆಯುವರು ಮುಂದೆ ಸ್ವಾಮಿಯ ನೆನೆದು
ಸ್ವಾಮಿ ಅಯ್ಯಪ್ಪಾ ಸ್ವಾಮಿ ಅಯ್ಯಪ್ಪಾ
ಶರಣಂ ಅಯ್ಯಪ್ಪಾ ತಂದೆ ಶರಣಂ ಅಯ್ಯಪ್ಪಾ
ಶರಣಂ ಅಯ್ಯಪ್ಪಾ ತಂದೆ ಶರಣಂ ಅಯ್ಯಪ್ಪಾ
ಕಡಲಲೆಯ ಹಾಗೆ ಬರುತಿರುವ ಜನರು
ಭಕ್ತಿಯೇ ಅಲ್ಲಿ ಎಲ್ಲರ ಉಸಿರು
ಹದಿನೆಂಟು ಮೆಟ್ಟಿಲ ಏರುತ್ತಲಿರಲು
ಎಲ್ಲರೆದೆಯಲ್ಲಿ ಹರುಷದ ಹೊನಲು
ತುಪ್ಪದಭಿಷೇಕ ಗಂಧದಭಿಷೇಕ
ಧರ್ಮಶಾಸ್ತನಿಗೆ ಹಲವು ಅಭಿಷೇಕ
ಕೋಟಿಕಂಗಳಿಗೆ ಅದು ದೇವಲೋಕ
ನಿಜವಾಗಿ ಅಂದೇ ಬದುಕಿದ್ದು ಸಾರ್ಥಕ
ಸ್ವಾಮಿ ಅಯ್ಯಪ್ಪಾ ಸ್ವಾಮಿ ಅಯ್ಯಪ್ಪಾ
ಶರಣಂ ಅಯ್ಯಪ್ಪಾ ತಂದೆ ಶರಣಂ ಅಯ್ಯಪ್ಪಾ
ಶರಣಂ ಅಯ್ಯಪ್ಪಾ ತಂದೆ ಶರಣಂ ಅಯ್ಯಪ್ಪಾ

ಓಂ ಓಂ ಅಯ್ಯಪ್ಪ ಓಂ ಗುರುನಾಥ ಅಯ್ಯಪ್ಪ
ಓಂ ಓಂ ಅಯ್ಯಪ್ಪ ಓಂ ಗುರುನಾಥ ಅಯ್ಯಪ್ಪ
ಓಂ ಓಂ ಅಯ್ಯಪ್ಪ ಓಂ ಗುರುನಾಥ ಅಯ್ಯಪ್ಪ
ವರುಷಕ್ಕೆ ಒಮ್ಮೆ ದೇವರಿಗೆ ಇಡುವ
ಒಡವೆಗಳು ಇಡುವ ಪೆಟ್ಟಿಗೆಯು ಬರುವ
ಆ ದೃಶ್ಯವನು ಕಾಣುವುದೇ ಭಾಗ್ಯ
ನೂರು ಜನುಮಗಳು ತಂದಿರುವ ಪುಣ್ಯ
ಅಲಂಕಾರವೆಲ್ಲ ಮುಗಿದಾದ ಮೇಲೆ
ಕರ್ಪೂರದಿಂದಾ ಬೆಳಗುವಾ ವೇಳೆ
ಬಾನಲ್ಲಿ ಮೂಡಿ ಬರುವುದು ಜ್ಯೋತಿ
ಬೆಳಗುವುದು ಬೆಳಗುವುದು ಆನಂದ ಜ್ಯೋತಿ
ಬೆಳಗುವುದು ಬೆಳಗುವುದು ಆನಂದ ಜ್ಯೋತಿ
ಸ್ವಾಮಿಯೇ ಅಯ್ಯಪ್ಪಾ
ಶರಣಂ ಶರಣಂ ಅಯ್ಯಪ್ಪಾ
ಸ್ವಾಮಿಯೇ ಅಯ್ಯಪ್ಪಾ
ಶರಣಂ ಶರಣಂ ಅಯ್ಯಪ್ಪಾ
ಸ್ವಾಮಿಯೇ ಅಯ್ಯಪ್ಪಾ
ಶರಣಂ ಶರಣಂ ಅಯ್ಯಪ್ಪಾ
ಸ್ವಾಮಿಯೇ ಅಯ್ಯಪ್ಪಾ
ಶರಣಂ ಶರಣಂ ಅಯ್ಯಪ್ಪಾ
ಸ್ವಾಮಿಯೇ ಅಯ್ಯಪ್ಪಾ

*Disclaimer: PlanetRead does not own these lyrics and is not using them for any commercial purpose. For over 20 years, PlanetRead has been subtitling Bollywood songs for mass literacy. These lyrics are being offered as part of PlanetRead's literacy development initiative.*

*PlanetRead is a tax-exempt, not-for-profit: 501(c) (3) in the United States and 80(G) in India.*